# ನಿತ್ಯ ಬಳಕೆಯಲ್ಲಿ ನನ್ನ ಕನ್ನಡ

( ಚಿಂತನ- ಮಂಥನ)

ಮನುಷ್ಯನಿಗೆ ದೊರೆತ ಅತಿ ದೊಡ್ಡ ವರ ಅಥವಾ ಉಡುಗೊರೆ ಮಾತು. ಮಾತನ್ನು ಅಭಿವ್ಯಕ್ತಗೊಳಿಸಲು ಭಾಷೆ ಅತ್ಯಗತ್ಯ.

ಒಂದು ಮಗು ಮೊತ್ತಮೊದಲು ಕಲಿಯುವುದು ತನ್ನ ಮನೆಯ ಭಾಷೆ ಅಂದರೆ ಮಾತೃಭಾಷೆ. ಬೆಳೆಯುತ್ತ ಹೋದಂತೆ ಇನ್ನೂ ಅನೇಕ ಭಾಷೆಗಳನ್ನು ಕಲಿಯುತ್ತದೆ. ಮನೆಯಲ್ಲಿ ಬಳಸುವ ಮಾತೃ ಭಾಷೆಯನ್ನಾಗಲಿ, ವ್ಯಾವಹಾರಿಕವಾಗಿ ಬಳಸುವ ಇನ್ನಾವುದೇ ಭಾಷೆಯನ್ನಾಗಲಿ ಸಮಾಜದಲ್ಲಿ ಸಾಮೂಹಿಕವಾಗಿ ಬಳಸುವುದು ಸಾಧ್ಯವಿಲ್ಲ. ಆಗ ಆ ಪ್ರದೇಶದ ಪ್ರಾದೇಶಿಕ ಭಾಷೆ ಅಥವಾ ಆಡಳಿತ ಭಾಷೆಯಲ್ಲಿ ವ್ಯವಹರಿಸುವುದು ಅಗತ್ಯ. ಕರ್ನಾಟಕದಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ಜನರು ಬೇರೆ ಬೇರೆ ಮಾತೃಭಾಷೆಯನ್ನು ಹೊಂದಿದ್ದಾರೆ ಆದರೆ ಕರ್ನಾಟಕದ ರಾಜ್ಯಭಾಷೆ ಮತ್ತು ಆಡಳಿತ ಭಾಷೆ ಕನ್ನಡ. ಇದರಿಂದ ಸ್ಪಷ್ಟವಾಗುವುದೇನೆಂದರೆ ಕರ್ನಾಟಕದಲ್ಲಿ ಜನರ ನಡುವಿನ ಕೊಂಡಿ 'ಕನ್ನಡ ಭಾಷೆ'. ಕನ್ನಡನಾಡಿನ ಪ್ರತಿಯೊಬ್ಬರು ಕನ್ನಡ ಭಾಷೆಯನ್ನು ಸ್ಪಷ್ಟವಾಗಿ, ಶುದ್ಧವಾಗಿ ಬರೆಯುವುದು ಮತ್ತು ಓದುವುದರ ಜೊತೆಗೆ ಪರಿಣಾಮಕಾರಿಯಾಗಿ ಬಳಕೆಮಾಡಬೇಕು. ದಿನನಿತ್ಯದ ವ್ಯವಹಾರಗಳಲ್ಲಿ ಕನ್ನಡ ಮೊದಲ ಆದ್ಯತೆಯಾಗಿರಬೇಕು.

ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ನಾಶದ ಅಂಚಿನಲ್ಲಿದೆ ಅದನ್ನು ಉಳಿಸಬೇಕು ಎಂಬ ಆಗ್ರಹ ಕೇಳಿಬರುತ್ತಿದೆ. ಇದೊಂದು ದೊಡ್ಡ ವಿಪರ್ಯಾಸ! ಕನ್ನಡನಾಡಿನಲ್ಲಿಯೇ ಕನ್ನಡವನ್ನು ಉಳಿಸಬೇಕು ಎಂಬ ಕೂಗು ಆಘಾತಕಾರಿ ಯಾದದ್ದು.

ಇದಕ್ಕೆಲ್ಲ ಮೂಲಕಾರಣವೇ ಕನ್ನಡ ಬಳಕೆಯ ಹಿಂಜರಿಕೆ. ಮೇಲು-ಕೀಳು ಎಂಬ ತಾರತಮ್ಯ ಭಾವನೆಯು ಭಾಷೆಯ ಅಂಗಳಕ್ಕೂ ಕಾಲಿಟ್ಟಿದೆ. ಭಾವನೆಗಳನ್ನು ವ್ಯಕ್ತಪಡಿಸುವ ಭಾಷೆಗಳಲ್ಲಿ ಮೇಲು-ಕೀಳು ಇರಲು ಸಾಧ್ಯವೇ? ಈ ರೀತಿಯ ವರ್ತನೆಗಳ ಮೂಲಕ ನಾವು ನಮ್ಮತನವನ್ನು ಕೀಳಾಗಿ ತೋರಿಸುತ್ತಿದ್ದೇವೆ. ಈ ರೀತಿಯ ವರ್ತನೆ ಇನ್ಯಾವ ಪ್ರದೇಶಗಳಲ್ಲೂ ಕಾಣಸಿಗುವುದಿಲ್ಲ.

ಕನ್ನಡಿಗರು ತಮ್ಮ ಭಾಷೆಯನ್ನು ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಉದಾಹರಣೆಗೆ ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳಲ್ಲಿ ಅಥವಾ ಇನ್ಯಾವುದೇ ಕಚೇರಿಗಳಲ್ಲಿ ಅಧಿಕಾರ ವರ್ಗದಲ್ಲಿ ಅನ್ಯ ಭಾಷಿಕರೇ ತುಂಬಿ ಹೋಗಿದ್ದಾರೆ .ಅವರಲ್ಲಿ ತಿಳಿದವರು ಆಂಗ್ಲ ಭಾಷೆಯನ್ನು ಅಥವಾ ಅಧಿಕಾರಿಗಳಿಗೆ ಅನುಕೂಲಕರ ಇನ್ಯಾವುದೇ ಭಾಷೆಯಲ್ಲೂ ವ್ಯವಹರಿಸಿದರೆ ಇದರಿಂದ ಕೇವಲ ಕನ್ನಡ ಮಾತ್ರ ಬರುವ ಸಾಮಾನ್ಯ ನಾಗರಿಕರಿಗೆ ತೊಂದರೆಯಾಗುತ್ತದೆ. ಹಾಗಾಗಿ ನಮಗೆಷ್ಟೇ ಭಾಷೆಗಳು ತಿಳಿದಿದ್ದರು ನಾವುಗಳು ಸಾರ್ವಜನಿಕ ವಲಯಗಳಲ್ಲಿ ಕನ್ನಡವನ್ನೇ ಮಾತನಾಡುವ ಪರಿಪಾಠ ಬೆಳೆಸಿ ಕೊಳ್ಳಬೇಕು. ಇದೇ ಸಂದರ್ಭದಲ್ಲಿ ಇತ್ತೀಚಿಗೆ ಬಸ್ಸುಗಳಲ್ಲಿ ಕನ್ನಡದಲ್ಲಿ ನಾಮಫಲಕಗಳನ್ನು ಅಳವಡಿಸುವುದಿಲ್ಲ ಎಂಬ ಬಗ್ಗೆ ನಡೆದ ಹೋರಾಟವನ್ನು ಗಮನಿಸಬಹುದು. ಇದು ಅತ್ಯಂತ ಸೂಕ್ತವಾದ ಮತ್ತು ಅಗತ್ಯವಾದ ಹೋರಾಟ. ಏಕೆಂದರೆ ಹೆಚ್ಚಾಗಿ ಕರ್ನಾಟಕದಲ್ಲಿ ಬಸ್ಸುಗಳಲ್ಲಿ ಪ್ರಯಾಣಿಸುವವರು ಸಾಮಾನ್ಯ ನಾಗರಿಕರು ಹೆಚ್ಚಾಗಿ ಕನ್ನಡವನ್ನು ಮಾತ್ರ ಬಲ್ಲವರು. ಬಸ್ಸುಗಳಲ್ಲಿ ಕನ್ನಡದಲ್ಲಿ ಫಲಕಗಳು ಇರದಿದ್ದಲ್ಲಿ ಇವರ ಪ್ರಯಾಣಕ್ಕೆ, ದಿನನಿತ್ಯದ ವ್ಯವಹಾರಗಳಿಗೆ ತೊಂದರೆಯಾಗುತ್ತದೆ.

ಕನ್ನಡದಲ್ಲಿ ಮಾತನಾಡಬೇಕು ಎಂದರೆ ಬೇರೆ ಭಾಷೆಯನ್ನು ಮಾತನಾಡಬಾರದೆಂದಲ್ಲ. ಈಗಾಗಲೇ ನಮ್ಮ ನಿತ್ಯಬಳಕೆಯ ಕನ್ನಡದಲ್ಲಿ ಬೇರೆ ಭಾಷೆಯ ಪದಗಳು ಸೇರಿಹೋಗಿವೆ. ಆದರೆ ಬೇರೆ ಭಾಷೆಯ ಕಲಿಯುವಿಕೆ ನಮ್ಮತನಕ್ಕೆ ಪೆಟ್ಟುಕೊಡಬಾರದು. ನಮ್ಮ ಭಾಷೆಯ ಬಗೆಗಿನ ಕೀಳರಿಮೆಗೆ ಕಾರಣವಾಗಬಾರದು. ಎಲ್ಲಿ ಕನ್ನಡವನ್ನು ಬಳಸಬೇಕೋ ಅಲ್ಲಿ ಕನ್ನಡವನ್ನೇ ಬಳಸಬೇಕು.

ಒಂದು ಭಾಷೆಯ ವರ್ತಮಾನ ಮತ್ತು ಭವಿಷ್ಯ ಅರ್ಥಪೂರ್ಣವಾಗುವುದು ಅದು ಬರಹದಲ್ಲಿ ದಾಖಲಾಗುವ ಜೊತೆಗೆ ಜನರ ಆಡು ನುಡಿಯಲ್ಲಿ ಬಳಕೆಯಾದಾಗ. ಕನ್ನಡಿಗರಾದ ನಾವು ಹೆಚ್ಚುಹೆಚ್ಚಾಗಿ ಕನ್ನಡವನ್ನೇ ಬಳಸಿ ಬೇರೆಯವರಿಗೂ ಪ್ರೇರೇಪಣೆ ನೀಡಿದಾಗ ಭಾಷೆ ಜೀವಂತವಾಗಿರುತ್ತದೆ.

"ಸಿರಿಗನ್ನಡಂ ಗೆಲ್ಗೆ . ಸಿರಿಗನ್ನಡಂ ಬಾಳ್ಗೆ".

- ವರ್ಷಿತಾ ಯಸ್

ದ್ವಿತೀಯ ಬಿ.ಬಿ.ಎ

ಗೋವಿಂದದಾಸ

ಪದವಿ ಕಾಲೇಜು

ಸುರತ್ಕಲ್.

Created with Mi Notes